| ಪರಿವಿಡಿ | | |
|---|---|---|
| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
| ಮುನ್ನುಡಿ | | iii |
| ಕಾರ್ಯನಿರ್ವಾಹಕ ಸಾರಾಂಶ | | V |
| **ಅಧ್ಯಾಯ–I** | | |
| **ಪರಿಚಯ** | | |
| ಯೋಜನೆಯ ಕುರಿತು | 1.1 | 01 |
| ಸಂಸ್ಥೆ ರಚನೆ ಮತ್ತು ಅವುಗಳ ಪಾತ್ರಗಳು | 1.2 | 04 |
| ಲೆಕ್ಕಪರಿಶೋಧನೆಯ ಉದ್ದೇಶಗಳು | 1.3 | 05 |
| ಲೆಕ್ಕಪರಿಶೋಧನೆಯ ಮಾನದಂಡಗಳು | 1.4 | 05 |
| ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ವಿಧಾನ | 1.5 | 06 |
| ಕೃತಜ್ಞತೆ | 1.6 | 06 |
| ವರದಿಯ ರಚನೆ | 1.7 | 06 |
| **ಅಧ್ಯಾಯ–II** | | |
| **ಯೋಜನೆ** | | |
| ಸ್ಮಾರ್ಟ್ ಸಿಟಿಗಳ ಆಯ್ಕೆ | 2.1 | 07 |
| ಸ್ಮಾರ್ಟ್ ಸಿಟಿ ಪ್ರಸ್ತಾವನೆ ಸಿದ್ಧತೆ | 2.2 | 08 |
| ಪ್ರದೇಶಾಧಾರಿತ ಅಭಿವೃದ್ಧಿ ಕ್ಷೇತ್ರಗಳ ಹೊರಗಿನ ಯೋಜನೆಗಳ ಸೇರ್ಪಡೆ | 2.3 | 11 |
| ಸಾರಿಗೆ ಮತ್ತು ಚಲನಶೀಲತೆ | 2.4 | 12 |
| ಸಹೋದರಿ ನಗರಗಳ ಪರಿಕಲ್ಪನೆಯ ಅನುಷ್ಠಾನ | 2.5 | 15 |
| **ಅಧ್ಯಾಯ–III** | | |
| **ಹಣಕಾಸು ನಿರ್ವಹಣೆ** | | |
| ಎಸ್‌ಪಿವಿಗಳ ಹಣಕಾಸು ನಿರ್ವಹಣೆ | 3.1 | 17 |
| ಮಿಷನ್ ನಿಧಿ ಸಂಗ್ರಹಣೆಗೆ ಹಣಕಾಸು ಸಂಪನ್ಮೂಲಗಳನ್ನು ಸಂಗ್ರಹಿಸದಿರುವುದು | 3.2 | 18 |
| ಕೇಂದ್ರ ಪುರಸ್ಕೃತ ಯೋಜನೆ (ಸಿಎಸ್ಎಸ್) ಅನುದಾನದಿಂದ ಗಳಿಸಿದ ₹2.69 ಕೋಟಿಯ ಬಡ್ಡಿ ಮೊತ್ತವನ್ನು ಜಮಾ ಮಾಡದಿರುವುದು. | 3.3 | 21 |
| ಸಂಕಲ್ಪಿತ ಉದ್ದೇಶವನ್ನು ಮೀರಿ ಎಸ್‌ಸಿಎಂ ನಿಧಿಗಳ ಅನುಚಿತ ಬಳಕೆ | 3.4 | 21 |
| ಹಣಕಾಸು ನಿರ್ವಹಣೆಯಲ್ಲಿನ ಇತರ ಕೊರತೆಗಳು | 3.5 | 22 |
| **ಅಧ್ಯಾಯ–IV** | | |
| **ಯೋಜನೆಗಳ ಅನುಷ್ಠಾನ ಮತ್ತು ಮೇಲ್ವಿಚಾರಣೆ** | | |
| ಕನಿಷ್ಠ ಸಂದಾಯಿತ ಬಂಡವಾಳದ ವಂತಿಗೆ ನೀಡದಿರುವುದು | 4.1 | 28 |
| ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ನೇಮ ಮಾಡದಿರುವುದು | 4.2 | 29 |
| ಕಾರ್ಯಾಚರಣೆಯ ಸ್ವಾತಂತ್ರ್ಯದ ಕೊರತೆ | 4.3 | 30 |
| ಯೋಜನೆಗಳ ಮಂಜೂರಾತಿಯಲ್ಲಿ ವಿಳಂಬ | 4.4 | 31 |
| ಟೆಂಡರ್ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ವಿಳಂಬ | 4.5 | 32 |

| | | |
|---|---|---|
| ಪ್ಯಾನ್ ಸಿಟಿ ಅಭಿವೃದ್ಧಿ | 4.6 | 33 |
| ಎಸ್‌ಪಿವಿಗಳಿಂದ ಸ್ಮಾರ್ಟ್ ಪರಿಹಾರಗಳ ಅನುಷ್ಠಾನ | 4.7 | 40 |
| ಪಾದಚಾರಿ ಮಾರ್ಗಗಳ ವಿನ್ಯಾಸ | 4.8 | 49 |
| ಸ್ಮಾರ್ಟ್ ಸಿಟಿ ಯೋಜನೆಗಳ ಪರಿಣಾಮದ ಮೌಲ್ಯಮಾಪನ | 4.9 | 50 |
| ಎಸ್‌ಪಿವಿಗಳು ಮತ್ತು ಬಳಕೆದಾರ ಇಲಾಖೆಯ ನಡುವೆ ಸಮನ್ವಯದ ಕೊರತೆ. | 4.10 | 51 |
| ಮೂಲಭೂತ ಸೌಕರ್ಯಗಳ ಪೂರೈಕೆ | 4.11 | 61 |
| ಉದ್ಯಾನವನಗಳು ಮತ್ತು ಸಾರ್ವಜನಿಕ ಸ್ಥಳಗಳು | 4.12 | 64 |
| ಎಸ್‌ಪಿವಿಗಳ ನಿರ್ದೇಶಕರ ಮಂಡಳಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಪ್ರಾತಿನಿಧ್ಯದ ಕೊರತೆ | 4.13 | 68 |
| ಗುಣಮಟ್ಟ ಮೇಲ್ವಿಚಾರಣಾ ಸಲಹೆಗಾರರನ್ನು ನೇಮಿಸದಿರುವುದು | 4.14 | 68 |
| ಅನುಬಂಧಗಳು | | 71 |
| ಪದಕೋಶ | | 114 |


**ಅನುಬಂಧಗಳ ಪಟ್ಟಿ**


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1.1(ಎ) | ಪರೀಕ್ಷಾ ಪರಿಶೀಲನೆಗೆ ಆಯ್ಕೆ ಮಾಡಲಾದ ಚಾಲ್ತಿಯಲ್ಲಿರುವ ಯೋಜನೆಗಳ ಪಟ್ಟಿ | 71 |
| 1.1(ಬಿ) | ಪರೀಕ್ಷಾ ಪರಿಶೀಲನೆಗೆ ಆಯ್ಕೆ ಮಾಡಲಾದ ಪೂರ್ಣಗೊಂಡ ಯೋಜನೆಗಳ ಪಟ್ಟಿ | 76 |
| 2.1 | ಸ್ಮಾರ್ಟ್ ಸಿಟಿಗಳ ಗುರಿಗಳ ಸಾಧನೆಯನ್ನು ತೋರಿಸುವ ತಃಖ್ತೆ | 81 |
| 2.2 | ನಿಯೋಜಿತ ಜಾತಿ ಯೋಜನೆಗಳಲ್ಲಿ ನಿರ್ದಿಷ್ಟಪಡಿಸಿದ ಗುರಿಗಳೊಂದಿಗೆ ಹೊಂದಿಕೆಯಾಗದ ಯೋಜನೆಗಳ ಪಟ್ಟಿ. | 109 |
| 3.1 | 26 ಪಿಪಿಪಿ ಯೋಜನೆಗಳ ಅನುಷ್ಠಾನದ ವಿವರಗಳನ್ನು ತೋರಿಸುವ ತಃಖ್ತೆ | 112 |

## ಮುನ್ನುಡಿ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಸಲ್ಲಿಸಿದ ಈ ವರದಿಯನ್ನು ಸಂವಿಧಾನದ 151 (2)ನೇ ವಿಧಿಯ ಅಡಿಯಲ್ಲಿ ಕರ್ನಾಟಕ ರಾಜ್ಯಪಾಲರಿಗೆ ಸಲ್ಲಿಸಲು ಸಿದ್ಧಪಡಿಸಲಾಗಿದ್ದು, ಇದನ್ನು ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲಾಗುವುದು.

2015–16 ರಿಂದ ಜೂನ್ 2024ರ ಅವಧಿಯನ್ನು ಒಳಗೊಂಡ ವರದಿಯು 'ಸ್ಮಾರ್ಟ್ ಸಿಟಿ ಮಿಷನ್ ಅನುಷ್ಠಾನ'ದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

ಲೆಕ್ಕಪರಿಶೀಲನೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಬಿಡುಗಡೆ ಮಾಡಿದ ಲೆಕ್ಕಪರಿಶೀಲನಾ ಮಾನದಂಡಗಳ ಅನುಸಾರವಾಗಿ ನಡೆಸಲಾಗಿದೆ.

ಭಾಷಾಂತರಿಸಿದ ಈ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

## ಕಾರ್ಯನಿರ್ವಾಹಕ ಸಾರಾಂಶ

ನಗರಗಳ ಬದಲಾಗುತ್ತಿರುವ ಅಗತ್ಯಗಳನ್ನು ಪೂರೈಸಲು ಮತ್ತು ನಗರಗಳ ಭೌತಿಕ, ಸಾಂಸ್ಥಿಕ, ಸಾಮಾಜಿಕ ಮತ್ತು ಆರ್ಥಿಕ ಮೂಲಸೌಕರ್ಯಗಳ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ಭಾರತ ಸರ್ಕಾರವು ಜೂನ್ 25, 2015 ರಂದು ಸ್ಮಾರ್ಟ್ ಸಿಟಿ ಮಿಷನ್ (ಎಸ್‌ಸಿಎಂ) ಅನ್ನು ಪ್ರಾರಂಭಿಸಿತು. 2011ರ ಜನಗಣತಿಯ ಪ್ರಕಾರ, ನಗರಗಳು ಜನಸಂಖ್ಯೆಯ ಶೇಕಡಾ 63ರಷ್ಟು ಜನರನ್ನು ಹೊಂದಿವೆ. ಈ ಮಿಷನ್ 100 ನಗರಗಳನ್ನು ಒಳಗೊಳ್ಳಬೇಕಿತ್ತು ಮತ್ತು ಅದರ ಅವಧಿ ಐದು ವರ್ಷಗಳು (2015–16 ರಿಂದ 2019–20) ಇದನ್ನು ಮಾರ್ಚ್ 2025ರವರೆಗೆ ವಿಸ್ತರಿಸಲಾಗಿದೆ.

ಮಿಷನ್ ಎರಡು ಘಟಕಗಳನ್ನು ಹೊಂದಿದೆ, ಅವುಗಳೆಂದರೆ, ಪ್ರದೇಶ ಆಧಾರಿತ ಅಭಿವೃದ್ಧಿ (ಎಬಿಡಿ) ಮತ್ತು ಪ್ಯಾನ್ ಸಿಟಿ ಅಭಿವೃದ್ಧಿ. ಮಿಷನ್ ಅಡಿಯಲ್ಲಿ ಕರ್ನಾಟಕದ ಏಳು ನಗರಗಳನ್ನು ಆಯ್ಕೆ ಮಾಡಲಾಗಿದೆ, ಅವುಗಳೆಂದರೆ ಬೆಳಗಾವಿ, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರು.

'ಸ್ಮಾರ್ಟ್ ಸಿಟಿ ಮಿಷನ್ ಅನುಷ್ಠಾನದ' ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು, ಯೋಜನೆಯ ಅನುಷ್ಠಾನವು ಇತರ ಸಂಬಂಧಿತ ಸರ್ಕಾರಿ ಯೋಜನೆಗಳೊಂದಿಗೆ ಹೊಂದಾಣಿಕೆಯಲ್ಲಿ ರೂಪಿಸಲ್ಪಟ್ಟಿದೆಯೇ, ರಾಜ್ಯ ಸರ್ಕಾರದಿಂದ ನಗರಗಳು/ವಿಶೇಷ ಉದ್ದೇಶ ಘಟಕಗಳಿಗೆ (ಎಸ್‌ಪಿವಿ) ಬಿಡುಗಡೆಯಾದ ನಿಧಿಗಳು ಮತ್ತು ನಗರಗಳು/ಎಸ್‌ಪಿವಿಗಳು ನಿಧಿಗಳ ಕ್ರೋಢೀಕರಣ ಪರಿಣಾಮಕಾರಿಯಾಗಿದ್ದವು ಮತ್ತು ಯೋಜನೆಯ ಉದ್ದೇಶಗಳನ್ನು ಪರಿಗಣಿಸಿತೆ, ಯೋಜನೆಗಳನ್ನು ಸ್ಮಾರ್ಟ್ ಸಿಟಿ ಪ್ರಸ್ತಾವನೆಗಳ ಮತ್ತು ಎಸ್‌ಸಿಎಂಗಳ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕಾರ್ಯಗತಗೊಳಿಸಲಾಯಿತೇ; ಎಸ್‌ಸಿಎಂ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ವ್ಯವಸ್ಥೆ ಇದ್ದಿತೇ ಮತ್ತು ಎಸ್‌ಪಿವಿಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸಾಕಷ್ಟು ಪ್ರಾತಿನಿಧ್ಯವಿದೆಯೇ ಎಂದು ಪರಿಶೀಲಿಸಲು, ಕೈಗೊಳ್ಳಲಾಯಿತು.

2015–16 ರಿಂದ ಜೂನ್ 2024ರ ಅವಧಿಯಲ್ಲಿ ಮಿಷನ್ ಅನುಷ್ಠಾನವನ್ನು ಪರಿಶೀಲಿಸಲು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು (ಮೇ 2022 ರಿಂದ ಡಿಸೆಂಬರ್ 2022, ಜುಲೈ 2023 ರಿಂದ ಸೆಪ್ಟೆಂಬರ್ 2023 ಮತ್ತು ಮೇ 2024 ರಿಂದ ಜುಲೈ 2024).

### ಪ್ರಮುಖ ಲೆಕ್ಕಪರಿಶೋಧನಾ ಅವಲೋಕನಗಳು

### ಯೋಜನೆ

ಸ್ಮಾರ್ಟ್ ಸಿಟಿ ಸ್ಪರ್ಧೆ ಪ್ರಕ್ರಿಯೆಯ ಮೂಲಕ ನಗರಗಳ ಆಯ್ಕೆ ಮತ್ತು ಆಯ್ದ ನಗರಗಳಿಂದ ಸ್ಮಾರ್ಟ್ ಸಿಟಿ ಪ್ರಸ್ತಾವನೆ (ಎಸ್‌ಸಿಪಿ) ಗಳನ್ನು ಸಿದ್ಧಪಡಿಸುವುದು ಮಿಷನ್ ಅನುಷ್ಠಾನದಲ್ಲಿ ಪರಿಚಯಾತ್ಮಕ ಮೈಲಿಗಲ್ಲುಗಳಾಗಿವೆ. ಸ್ಮಾರ್ಟ್ ಸಿಟಿಗಳ ಎಸ್‌ಸಿಪಿಯಲ್ಲಿ ನಿರ್ದಿಷ್ಟಪಡಿಸಿದ ಒಂಬತ್ತು ಕಾರ್ಯತಂತ್ರದ ಸ್ತಂಭಗಳಿಗೆ ಜೋಡಿಸಲಾದ 135 ಗುರಿಗಳ ಪೈಕಿ ಸಾಧನೆಯು ಕೇವಲ 68 ಮಾತ್ರ ಇದ್ದಿತು ಮತ್ತು ಇತರ ಯೋಜನೆಗಳು ಪ್ರಗತಿಯಲ್ಲಿವೆ. ಸ್ಮಾರ್ಟ್ ಸಿಟಿಗಳು ಮೂಲತಃ ಯೋಜಿಸಲಾದ 544 ಯೋಜನೆಗಳಲ್ಲಿ 160 ಯೋಜನೆಗಳನ್ನು (ಶೇಕಡಾ 30) ಕೈಬಿಟ್ಟವು. ಇದು ವಸತಿ ಮತ್ತು ನಗರ ಕಾರ್ಯಗಳ ಮಂತ್ರಾಲಯ ಸೂಚನೆಗಳಿಗೆ ವಿರುದ್ಧವಾಗಿತ್ತು. ಈ ಯೋಜನೆಯ ಅನುಷ್ಠಾನದಲ್ಲಿ ಬಹು ಇಲಾಖೆಗಳ ಮಧ್ಯಸ್ಥಿಕೆಗಳು ಅಗತ್ಯವಾಗಿದ್ದು, ಒಂದೇ ಮಿಷನ್ ಅಡಿಯಲ್ಲಿ ಈ ಎಲ್ಲಾ ದೀರ್ಘಕಾಲೀನ ಗುರಿಗಳ ಸಾಧನೆಯನ್ನು ನಿರೀಕ್ಷಿಸುವುದು ಕಾರ್ಯಸಾಧ್ಯವಲ್ಲದ ಎಂದು ರಾಜ್ಯ ಸರ್ಕಾರವು ಹೇಳಿತು.

ಪ್ಯಾನ್ ಸಿಟಿ ಅಡಿಯಲ್ಲಿ ₹817.42 ಕೋಟಿ ಅನುದಾನವನ್ನು ಮೀಸಲಿಟ್ಟಿದ್ದರೂ, ₹1,462.67 ಕೋಟಿ ಮೊತ್ತದ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಟೆಂಡರ್ ಶೂರ್ ಮಾರ್ಗಸೂಚಿಗಳು ಹಲವಾರು

ಉಪಯೋಗ ಸಂಸ್ಥೆಗಳು ಒದಗಿಸುವ ನೀರು ಸರಬರಾಜು, ದೂರವಾಣಿ, ವಿದ್ಯುತ್, ಒಳಚರಂಡಿ ಇತ್ಯಾದಿ ಸೌಲಭ್ಯಗಳನ್ನು ಅಸಮರ್ಪಕವಾಗಿ ಅಳವಡಿಸುವುದರಿಂದ ಉಂಟಾಗುವ ರಸ್ತೆ ಜಾಲದ ಬಳಕೆಯ ಸಮಸ್ಯೆಗಳನ್ನು ನಿವಾರಿಸಲು ಉದ್ದೇಶಿತವಾಗಿದ್ದವು. ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಹೊರತುಪಡಿಸಿ ಇತರ ವಿಶೇಷ ಉದ್ದೇಶ ಘಟಕಗಳಲ್ಲಿ ಉಪಯುಕ್ತತೆಯ ಕೊಳವೆಗಳನ್ನು ಒದಗಿಸದಿರುವುದರಿಂದ, ವಿವಿಧ ಉಪಯುಕ್ತತೆಗಳ ಅಳವಡಿಕೆಗೆ ರಸ್ತೆ ಭಾಗವನ್ನು ಪದೇಪದೇ ತೋಡಬೇಕಾದ ಪರಿಸ್ಥಿತಿ ಉಂಟಾಯಿತು.

**ನಿಧಿ ನಿರ್ವಹಣೆ**

ಎಸ್‌ಪಿವಿಗಳು ಸರ್ಕಾರದ ಅನುದಾನಗಳನ್ನು ಹೊರತುಪಡಿಸಿ ಇತರ ಮೂಲಗಳಿಂದ ಬಹಳ ಕಡಿಮೆ ಆರ್ಥಿಕ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಾಧ್ಯವಾಯಿತು, ಇದು ಅವುಗಳ ರಚನೆಯ ಉದ್ದೇಶವನ್ನು ಸೋಲಿಸಿತು. ರಾಜ್ಯ ಮಟ್ಟದ ನೋಡಲ್ ಸಂಸ್ಥೆಯು (ಎಸ್‌ಎಲ್‌ಎನ್‌ಎ) ಪುರಸಭೆಯ ಬಾಂಡ್‌ಗಳು, ಪೂಲ್ಡ್ ಹಣಕಾಸು ಕಾರ್ಯವಿಧಾನಗಳು, ತೆರಿಗೆ ಹೆಚ್ಚಳ ಹಣಕಾಸು, ಮೌಲ್ಯ ಗ್ರಹಿಕೆಯ ಹಣಕಾಸು ಇತ್ಯಾದಿ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ನವೀನ ಹಣಕಾಸು ಕಾರ್ಯವಿಧಾನಗಳ ಮೂಲಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸಲಹೆಗಾರರ ಮೂಲಕ ನಗರಗಳ ಕ್ರೆಡಿಟ್ ರೇಟಿಂಗ್ ಮತ್ತು ಆರ್ಥಿಕ ಸುಧಾರಣಾ ಅಧ್ಯಯನಗಳನ್ನು ನಡೆಸಿತು. ಆದಾಗ್ಯೂ, ರಾಜ್ಯ ಸರ್ಕಾರವು ಅಸ್ತಿತ್ವದಲ್ಲಿರುವ ಕಾಯ್ದೆಗಳು/ನಿಯಮಗಳಿಗೆ ಶಾಸಕಾಂಗ ತಿದ್ದುಪಡಿಗಳನ್ನು ಜಾರಿಗೆ ತಂದ ನಂತರ ಎಲ್ಲಾ ಯುಎಲ್‌ಬಿಗಳಲ್ಲಿ ಸಾರ್ವತ್ರಿಕ ಅಳವಡಿಕೆಗೆ ಅದರ ಸೂಕ್ತತೆಯ ಬಗ್ಗೆ ಇನ್ನೂ (ಜೂನ್ 2024) ನಿರ್ಧಾರ ತೆಗೆದುಕೊಳ್ಳದಿದ್ದ ಕಾರಣ ಸಲಹೆಗಾರರು ಸಲ್ಲಿಸಿದ ಹಣಕಾಸು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಲಿಲ್ಲ. ಇದಲ್ಲದೆ ಈ ವಿಷಯದಲ್ಲಿ ಯಾವುದೇ ಪ್ರಗತಿಯಿರಲಿಲ್ಲ.

ರಾಜ್ಯ ಮಟ್ಟದ ನೋಡಲ್ ಸಂಸ್ಥೆಯು ಸ್ಮಾರ್ಟ್ ಸಿಟಿ ಯೋಜನೆ/ಕೋಶ ಸಂಬಂಧಿಸದ ಚಟುವಟಿಕೆಗಳಿಗೆ ₹0.75 ಕೋಟಿ ಖರ್ಚು ಮಾಡಿತ್ತು. ಯೋಜನಾ ನಿರ್ವಹಣಾ ಸಲಹೆಗಾರ (ಪಿಎಂಸಿ)ಗೆ ಮಾಡಿದ ಪಾವತಿಗಳಿಗೆ ಸಂಬಂಧಿಸಿದಂತೆ ಅಸಮರ್ಪಕ ಪರಿಶೀಲನೆಯಿಂದಾಗಿ ₹2.56 ಕೋಟಿ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು.

ಸಂಯೋಜಿತ ಆಜ್ಞೆ ಮತ್ತು ನಿಯಂತ್ರಣ ಕೇಂದ್ರ (ಐಸಿಸಿಸಿ) ಮಾಸ್ಟರ್ ಸಿಸ್ಟಮ್ ಇಂಟಿಗ್ರೇಟರ್‌ನ ಸೇವಾ ಪೂರೈಕೆದಾರರು ನಿಗದಿತ ರೀತಿಯಲ್ಲಿ ಕೆಲಸವನ್ನು ಪೂರ್ಣಗೊಳಿಸಲು ವಿಫಲರಾಗಿದ್ದರೂ, ಎಸ್‌ಎಲ್‌ಎನ್‌ಎಯು ಕಾಮಗಾರಿಗಳ ವಿಳಂಬ ನಿರ್ವಹಣೆಗೆ ದಂಡ ವಿಧಿಸುವ ಮತ್ತು ಸಂಗ್ರಹಿಸುವ ಒಪ್ಪಂದದ ಬಾಧ್ಯತೆಯನ್ನು ಜಾರಿಗೊಳಿಸುವಲ್ಲಿ ವಿಫಲವಾಯಿತು. ಒಪ್ಪಂದದಲ್ಲಿ ನಿರ್ದಿಷ್ಟ ದಂಡದ ದರವನ್ನು ಸೂಚಿಸಲಾಗಿದ್ದರೂ, ದಿನಕ್ಕೆ ₹2,000 ಮಾತ್ರ ದಂಡ ವಿಧಿಸುವುದು ಸಮರ್ಥನೀಯವಾಗಿರಲಿಲ್ಲ.

**ಅನುಷ್ಠಾನ ಮತ್ತು ಮೇಲ್ವಿಚಾರಣೆ**

ಮಾದರಿಯಾಗಿ ಆಯ್ಕೆ ಮಾಡಲಾದ ನಾಲ್ಕು ಎಸ್‌ಪಿವಿಗಳಲ್ಲಿ ಅಗತ್ಯತೆಯಾದ ₹200 ಕೋಟಿಗಳಿಗೆದುರಾಗಿ ಪ್ರತಿ ಸ್ಮಾರ್ಟ್ ಸಿಟಿಯ ನೈಜ ಸಂದಾಯಿತ ಬಂಡವಾಳವು ಕೇವಲ ₹10 ಲಕ್ಷ ಮಾತ್ರವಿತ್ತು, ಆದ್ದರಿಂದ ಕಂಪನಿಗಳ ಕಾಯ್ದೆಯ ನಿಬಂಧನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಎಸ್‌ಪಿವಿಗಳಿಗೆ ಪೂರ್ಣ ಸಮಯದ ಸಿಇಒಗಳನ್ನು ಒದಗಿಸುವಲ್ಲಿ ವಿಫಲವಾದದ್ದು ಅವುಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರಿತು. ಕಾರ್ಯಾಚರಣೆಯ ಸ್ವಾತಂತ್ರ್ಯದ ಕೊರತೆಯಿಂದಾಗಿ ತಾಂತ್ರಿಕ ಅನುಮೋದನೆಗಳು ಮತ್ತು ಬದಲಾವಣೆಗಳಿಗಾಗಿ ಎಸ್‌ಪಿವಿಗಳು ಸರ್ಕಾರದ ಮೇಲೆ ಅವಲಂಬಿತವಾಗಿದ್ದರಿಂದ ಯೋಜನೆಗಳು ವಿಳಂಬವಾದವು, ಇದರಲ್ಲಿ 645 ಯೋಜನೆಗಳಲ್ಲಿ ಕೇವಲ 45 ಯೋಜನೆಗಳನ್ನು ನಿಗದಿತ ಸಮಯದೊಳಗೆ ನೀಡಲಾಯಿತು.

ಕರ್ನಾಟಕ ನಗರಸಭಾ ಡೇಟಾ ಸಂಸ್ಥೆಯಲ್ಲಿ (ಕೆಎಂಡಿಎಸ್) ಕೇಂದ್ರೀಕೃತ ದತ್ತಾಂಶ ಕೇಂದ್ರವನ್ನು ಸ್ಥಾಪಿಸಲು ಮಾಸ್ಟರ್ ಸಿಸ್ಟಮ್ ಇಂಟಿಗ್ರೇಟರ್ ನೇಮಕವನ್ನು ಒಪ್ಪಂದವನ್ನು ನೀಡಿದ ಐದು ವರ್ಷಗಳ ನಂತರವೂ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಮತ್ತು ಆರ್ಥಿಕ ಪ್ರಗತಿಯು ₹60.22 ಕೋಟಿಗೆದುರಾಗಿ ಕೇವಲ

₹19.08 ಕೋಟಿಗಳಷ್ಟು ಸಾಧಿಸಾಲಾಗಿತ್ತು. ಕೆಎಂಡಿಎಸ್‌ನಲ್ಲಿ ಡೇಟಾ ಸೆಂಟರ್ ಪೂರ್ಣಗೊಳ್ಳದ ಕಾರಣ ಕೇಂದ್ರೀಕೃತ ಮತ್ತು ನಿಯಂತ್ರಣ ಕೇಂದ್ರದ ಅನುಷ್ಠಾನವನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ಟೆಂಡರ್ ಷರತ್ತುಗಳನ್ನು ತಿದ್ದಿದ್ದರಿಂದ ಶಿವಮೊಗ್ಗದಲ್ಲಿ ಐಸಿಸಿಸಿ ಯೋಜನೆಯ ಅನುಷ್ಠಾನಕ್ಕೆ ಅನರ್ಹ ಸ್ಥಳೀಯ ಸಿಸ್ಟಮ್ ಇಂಟಿಗ್ರೇಟರ್ (ಎಲ್‌ಎಸ್‌ಐ) ಆಯ್ಕೆಗೆ ಕಾರಣವಾಯಿತು, ಇದು ಟೆಂಡರ್ ಮೌಲ್ಯಮಾಪನ ಪ್ರಕ್ರಿಯೆಯನ್ನು ಕಲುಷಿತಗೊಳಿಸಿತು.

ಸ್ಥಳೀಯ ವ್ಯವಸ್ಥೆ ಇಲಾಖಾ ಮಟ್ಟದಲ್ಲಿ ಸಿದ್ಧವಾಗಿಲ್ಲದ ಕಾರಣ ಅಥವಾ ಭದ್ರತಾ ಕಾರಣಗಳಿಂದಾಗಿ ಐಸಿಸಿಸಿ ಯೊಂದಿಗೆ ಲೈನ್ ಇಲಾಖೆಗಳ ಏಕೀಕರಣವು ಬಾಕಿ ಇರುವುದರಿಂದ ಐಸಿಸಿಸಿಯ ಕಾರ್ಯವು ಕಳಪೆಯಾಗಿತ್ತು, ಇದು ಅಂತರ–ಇಲಾಖೆಯ ಕಳಪೆ ಸಮನ್ವಯವನ್ನು ಸೂಚಿಸುತ್ತದೆ ಪೊಲೀಸ್ ಇಲಾಖೆಯೊಂದಿಗೆ ಹಲವಾರು ಪತ್ರ ವ್ಯವಹಾರಗಳನ್ನು ಮಾಡಿದರೂ ಪೊಲೀಸ್ ಮತ್ತು ಸಂಚಾರ ಇಲಾಖೆಯು ಜಾರಿಗೆ ತಂದ ನಗರ ಕಣ್ಗಾವಲು ವ್ಯವಸ್ಥೆಯ ಏಕೀಕರಣವನ್ನು ಇನ್ನೂ ಕೈಗೊಳ್ಳಲಾಗಿಲ್ಲ. ಅದೇ ರೀತಿ, ಸಿಟಿ ಕಣ್ಗಾವಲು ವ್ಯವಸ್ಥೆ ಮತ್ತು ಹುಬ್ಬಳ್ಳಿ–ಧಾರವಾಡ ಬಸ್ ಕ್ಷಿಪ್ರ ಸಾರಿಗೆ ವ್ಯವಸ್ಥೆಯಿಂದ (ಎಚ್‌ಡಿಬಿಆರ್‌ಟಿ) ಜಾರಿಗೆ ತರಲಾದ ಬುದ್ಧಿವಂತ ಸಾರಿಗೆ ನಿರ್ವಹಣಾ ವ್ಯವಸ್ಥೆಯನ್ನು, ಸಿಸಿಟಿವಿ ಕ್ಯಾಮೆರಾಗಳ ಸ್ಥಳ, ಬಸ್ ಮಾರ್ಗಗಳು ಮತ್ತು ನಿಲ್ದಾಣಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ಎಚ್‌ಡಿಬಿಆರ್‌ಟಿಗಳು ಒದಗಿಸದ ಕಾರಣ ಐಸಿಸಿಸಿಯೊಂದಿಗೆ ಸಂಯೋಜಿಸಲು ಸಾಧ್ಯವಾಗಲಿಲ್ಲ. ಪಿಪಿಪಿ ಆಧಾರದ ಮೇಲೆ ಎಲ್‌ಇಡಿ ದೀಪಗಳನ್ನು ಅಳವಡಿಸುವ ಯೋಜನೆಯು ಕಾರ್ಯರೂಪಕ್ಕೆ ಬರದ ಕಾರಣ, ಎಲ್‌ಇಡಿ ಬೀದಿ ದೀಪಗಳಿಗಾಗಿ ಏಕೀಕರಣ ಕೇಂದ್ರೀಕೃತ ನಿಯಂತ್ರಣ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು (ಸಿಸಿಎಂಎಸ್) ಸಂಯೋಜನೆಯನ್ನು ಕೈಗೊಳ್ಳಲಾಗಿಲ್ಲ. ವಿಪತ್ತು ನಿರ್ವಹಣಾ ವ್ಯವಸ್ಥೆಗಳು ಪರಿಸರ ಸಂವೇದಕಗಳು, ಶಕ್ತಿ ಮೀಟರ್‌ಗಳು, ಡಿಜಿಟಲ್ ಪ್ರದರ್ಶನ ಫಲಕಗಳು ಮತ್ತು ಸ್ಮಾರ್ಟ್ ಹೆಲ್ತ್ ಕಿಯೋಸ್ಕ್‌ಗಳ ಏಕೀಕರಣವು ಇನ್ನೂ ಈಡೇರಬೇಕಿತ್ತು.

ನೀರು ಸರಬರಾಜು, ಅನಿಲ ಪೈಪ್‌ಲೈನ್‌ಗಳು, ವಿದ್ಯುತ್ ಮಾರ್ಗಗಳು ಇತ್ಯಾದಿಗಳಿಗೆ ಒದಗಿಸಲಾದ ಸೇವಾಸೌಕರ್ಯ ನಳಿಕೆಗಳು ಆಯಾ ಇಲಾಖೆಗಳು ಕಾರ್ಯಸಾಧ್ಯವಲ್ಲದ ಕಾರಣ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ ನಿಂದ ಸೇವಾಸೌಕರ್ಯ ನಳಿಕೆಗಳಲ್ಲಿ ನೀರಿನ ಮಾರ್ಗಕ್ಕಾಗಿ 5.73 ಕಿ.ಮೀ ಉದ್ದದ ಪೈಪ್ ಲೈನ್ ಅನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ ಏಕೆಂದರೆ ಹಾಕಲಾದ ಪೈಪ್‌ಗಳ ಒತ್ತಡದ ರೇಟಿಂಗ್ ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆಯಡಿ ಹಾಕಲಾದ ಪೈಪ್‌ಗಳಿಗೆ ಹೊಂದಿಕೆಯಾಗುವುದಿಲ್ಲ. 5.751 ಕಿ.ಮೀ ಉದ್ದದ ಗ್ಯಾಸ್ ಪೈಪ್ ಲೈನ್ ನಲ್ಲಿ ಸ್ಟಾಪ್ ಆಫ್ ವಾಲ್‌ಗಳು, ಸ್ಕ್ವೀಜರ್ ಇತ್ಯಾದಿಗಳಿಗೆ ಅವಕಾಶವಿರಲಿಲ್ಲ, ಆದ್ದರಿಂದ ಗ್ಯಾಸ್ ಪೂರೈಕೆಗೆ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಬಳಕೆದಾರ ಇಲಾಖೆಗಳಿಂದ ಮಾಹಿತಿಗಳನ್ನು ಪರಿಗಣಿಸದೆ ಮತ್ತು ಸಾಕಷ್ಟು ತಾಂತ್ರಿಕ ತನಿಖೆಗಳನ್ನು ನಡೆಸದೆ ಭೂಗತ ನಾಳಗಳಲ್ಲಿ ವಿದ್ಯುತ್ ಕೇಬಲ್‌ಗಳನ್ನು ಸಾಗಿಸಲು ಟಿಎಸ್‌ಸಿಎಲ್, ಎಸ್‌ಎಸ್‌ಸಿಎಲ್ ಮತ್ತು ಎಚ್‌ಡಿಎಸ್‌ಸಿಎಲ್ ಡಬಲ್ ವಾಲ್ ಸುಕ್ಕುಗಟ್ಟಿದ ಪೈಪ್‌ಗಳನ್ನು ಹಾಕಿದವು. ಎಚ್‌ಡಿಎಸ್‌ಸಿಎಲ್ ನಿಂದ ರಚಿಸಲಾದ ₹62.60 ಕೋಟಿ ವೆಚ್ಚದ ಮೂಲಸೌಕರ್ಯಗಳಾದ "ಚಿಟಗುಪ್ಪಿ ಆಸ್ಪತ್ರೆಯ ಮೇಲ್ದರ್ಜೀಕರಣ, ಮೀನು ಮಾರುಕಟ್ಟೆಯ ಅಭಿವೃದ್ಧಿ, ಪ್ರಮುಖ ಮಾರುಕಟ್ಟೆಗಳ ನವೀಕರಣ ಮತ್ತು ವಾಣಿ ವಿಲಾಸ ಅಭಿವೃದ್ಧಿ ಉಪಕ್ರಮದಡಿಯಲ್ಲಿ ಒಂದು ಬಿಎಚ್‌ಕೆ ಘಟಕಗಳ ನಿರ್ಮಾಣ ಸೇರಿದಂತೆ ಎರಡು ವರ್ಷಗಳಿಗೂ ಹೆಚ್ಚು ಕಾಲ ನಿಷ್ಕ್ರಿಯವಾಗಿ ಉಳಿದಿವೆ. ಅಗತ್ಯ ಭೂಮಿ ಮತ್ತು ಶಾಸನಬದ್ಧ ಅನುಮತಿಗಳಿಲ್ಲದೆ ಕಾಮಗಾರಿಗಳನ್ನು ವಹಿಸಿಕೊಡುವುದರಿಂದ ನದಿ ದಂಡೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಉದ್ದೇಶಿತ ಪ್ರಯೋಜನಗಳನ್ನು ಸಾಧಿಸುವಲ್ಲಿ ಕೊರತೆ ಉಂಟಾಗಿದೆ (ಮಂಗಳೂರಿನ ತೋಟ ಮತ್ತು ಜಪ್ಪಿನಮೊಗರು ಗ್ರಾಮದ ನೇತ್ರಾವತಿ ನದಿ ದಂಡೆ).

ಸ್ಮಾರ್ಟ್ ಸಿಟಿಗಳ ನಿರ್ದೇಶಕ ಮಂಡಳಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅಸಮರ್ಪಕ ಪ್ರಾತಿನಿಧ್ಯ, ಪರಿಣಾಮ ಮೌಲ್ಯಮಾಪನ ಅಧ್ಯಯನಗಳ ಕೊರತೆ ಮತ್ತು ಅನುಚಿತ ನಡವಳಿಕೆ ಮತ್ತು ಗುಣಮಟ್ಟದ ಮೇಲ್ವಿಚಾರಣಾ ಸಲಹೆಗಾರರನ್ನು ನೇಮಿಸದಿರುವುದು ಮೇಲ್ವಿಚಾರಣಾ ದೋಷಗಳಲ್ಲಿ ಸೇರಿವೆ.

**ಶಿಫಾರಸುಗಳು**

1. ಸ್ಮಾರ್ಟ್ ನಗರಗಳು ಕೈಗೊಂಡಿರುವ ಯೋಜನೆಗಳ ದೀರ್ಘಕಾಲೀನ ಸ್ಥಿರತೆಯನ್ನು ಖಚಿತಪಡಿಸಲು ಸರ್ಕಾರದ ಅನುದಾನಗಳ ಹೊರತಾಗಿ ಇತರೆ ಸಂಪನ್ಮೂಲಗಳನ್ನು ಅನ್ವೇಷಿಸಬೇಕಿದೆ.

2. ಯೋಜನೆಯ ಅನುಷ್ಠಾನದಲ್ಲಿ ಹೊರಡಿಸಲಾದ ಮಾರ್ಗಸೂಚಿಗಳನ್ನು ಪಾಲಿಸುವಂತೆ ಮತ್ತು ಬಡ್ಡಿ ಬಾಕಿಗಳನ್ನು ಸಂಬಂಧಪಟ್ಟ ಕರ್ನಾಟಕ ಸರ್ಕಾರ/ಭಾರತ ಸರ್ಕಾರ ಖಾತೆಗಳಿಗೆ ಪಾವತಿಸುವಂತೆ ಸರ್ಕಾರವು ಎಸ್‌ಎಲ್‌ಎನ್‌ಎಗೆ ನಿರ್ದೇಶಿಸಬೇಕು. ಇದಲ್ಲದೆ, ಯೋಜನೆಯ ಅನುಷ್ಠಾನದಲ್ಲಿನ ವಿಚಲನಗಳು/ವಿಳಂಬಗಳಿಗೆ ಎಸ್‌ಪಿವಿಗಳು ಏಜೆನ್ಸಿಗಳ ಮೇಲೆ ಒಪ್ಪಂದದ ಬಾಧ್ಯತೆಗಳನ್ನು ಹೇರಬೇಕು.

3. ಯೋಜನೆಯ ಉತ್ತಮ ಅನುಷ್ಠಾನಕ್ಕಾಗಿ ಮತ್ತು ಬಹು ಪಾಲುದಾರರೊಂದಿಗೆ ಪರಿಣಾಮಕಾರಿ ಸಮನ್ವಯಕ್ಕಾಗಿ ಸರ್ಕಾರವು ಪೂರ್ಣಾವಧಿಯ ಸಿಇಓಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು.

ವಾಣಿಜ್ಯ ಹಣಕಾಸು ಮಾದರಿಗಳಿಗೆ ಅನುಗುಣವಾಗಿ ಅಧಿಕೃತ ಷೇರು ಬಂಡವಾಳ ಮತ್ತು ಎಸ್‌ಪಿವಿಗಳ ಸಂದಾಯಿತ ಬಂಡವಾಳವನ್ನು ನಿಗದಿಪಡಿಸುವಲ್ಲಿ ಸರ್ಕಾರವು ಸರಿಯಾದ ಕ್ರಮವನ್ನು ವಹಿಸಬೇಕು.

ಸರ್ಕಾರವು ಟೆಂಡರ್ ವಿತರಣಾ ಪ್ರಕ್ರಿಯೆಯನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದನ್ನು ಮತ್ತು ಇ–ಖರೀದಿಯಲ್ಲಿ ಕಡ್ಡಾಯವಾದಂತೆ ಅಂಗೀಕಾರ ಪತ್ರಗಳ ವಿತರಣೆಯನ್ನು ಖಚಿತಪಡಿಸಿಕೊಳ್ಳಬೇಕು.

4. ಸ್ಥಾಪಿಸಲಾದ ಸಾಫ್ಟ್‌ವೇರ್ ಅಪ್ಲಿಕೇಶನ್ ಗಳನ್ನು ಪರಿಣಾಮಕಾರಿಯಾಗಿ ಬಳಸಲಾಗಿದೆಯೆ ಎಂದು ಎಸ್‌ಪಿವಿಗಳು ಖಚಿತಪಡಿಸಿಕೊಳ್ಳಬೇಕು, ಅವು ಸಮಯೋಚಿತವಾಗಿರಬೇಕು ಮತ್ತು ಒಪ್ಪಂದದ ಅವಧಿಯಲ್ಲಿ ಜೀವನ/ಬೆಂಬಲದ ಅಂತ್ಯವನ್ನು ತಲುಪಬಾರದು.

5. ರಾಜ್ಯ ಸರ್ಕಾರವು ಕಲ್ಪಿಸಲಾದ ಉದ್ದೇಶಗಳನ್ನು ಸಾಧಿಸಲು ಏಳು ನಗರಗಳ ಎಲ್ಲಾ ದತ್ತಾಂಶ ಕೇಂದ್ರಗಳ ಏಕೀಕರಣದೊಂದಿಗೆ ಐಸಿಸಿಸಿ ಕೇಂದ್ರದ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಬೇಕು.

6. ರಸ್ತೆಗಳು/ಪಾದಚಾರಿ ಮಾರ್ಗಗಳು ತಾಂತ್ರಿಕ ಸಮಿತಿಯ ಮಾನದಂಡಗಳು ಮತ್ತು ಶಿಫಾರಸುಗಳಿಗೆ ಬದ್ಧವಾಗಿರುವುದನ್ನು ರಾಜ್ಯ ಸರ್ಕಾರ ಖಚಿತಪಡಿಸಿಕೊಳ್ಳಬೇಕು.

7. ರಾಜ್ಯ ಸರ್ಕಾರವು ಅಂತಿಮ ಬಳಕೆದಾರರ ಇಲಾಖೆಗಳೊಂದಿಗೆ ಸಾಕಷ್ಟು ಸಮನ್ವಯ ವ್ಯವಸ್ಥೆಯನ್ನು ಸ್ಥಾಪಿಸಬೇಕು, ಅಳವಡಿಸಿಕೊಂಡ ತಂತ್ರಜ್ಞಾನಗಳು ಅವುಗಳ ನಿರ್ದಿಷ್ಟತೆಗೆ ಅನುಗುಣವಾಗಿವೆಯೆ ಮತ್ತು ರಚಿಸಲಾದ ಸ್ವತ್ತುಗಳನ್ನು ಬಳಸಿಕೊಳ್ಳಲಾಗಿದೆಯೆ ಮತ್ತು ನಿರ್ವಹಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಬೇಕು.

8. ಎಸ್‌ಪಿವಿಗಳು ಮಿಷನ್ ಅಡಿಯಲ್ಲಿ ಕೈಗೆತ್ತಿಕೊಳ್ಳುವ ಕೆಲಸಗಳು ಸಂಬಂಧಿತ ಮಾನದಂಡಗಳಿಗೆ ಅನುಗುಣವಾಗಿವೆಯೇ ಮತ್ತು ಅವುಗಳ ಅನುಷ್ಠಾನದ ಸಮಯದಲ್ಲಿ ತಾಂತ್ರಿಕ ತಜ್ಞರ ಶಿಫಾರಸುಗಳನ್ನು ಸರಿಯಾಗಿ ಪರಿಗಣಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು.

9. ನಗರದ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸಲು ರಾಜ್ಯ ಸರ್ಕಾರವು ಎಸ್‌ಪಿವಿಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸಾಕಷ್ಟು ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಬೇಕು.

ಕಾರ್ಯಗತಗೊಳಿಸಿದ ಕಾಮಗಾರಿಗಳು ನಿಗದಿತ ಮಾನದಂಡಗಳನುಸಾರವಾಗಿವೆ ಎಂದು ಖಚಿತಪಡಿಸಿಕೊಳ್ಳಲು ಎಸ್‌ಪಿವಿಗಳು ಗುಣಮಟ್ಟ ಮೇಲ್ವಿಚಾರಣಾ ಸಲಹೆಗಾರರನ್ನು ನೇಮಿಸುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

10. ಎಸ್‌ಸಿಎಂನ ಪರಿಣಾಮಕಾರಿ ಅನುಷ್ಠಾನಕ್ಕೆ ಕಾರಣವಾದ ಉತ್ತಮ ಉಪಕ್ರಮಗಳು/ಆಚರಣೆಗಳನ್ನು ಪ್ರಸಾರ ಮಾಡಬಹುದು ಮತ್ತು ಸ್ಥಳೀಯ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಮಾರ್ಪಾಡುಗಳು, ಇದ್ದರೆ, ಅದರಂತೆ ಪುನರಾವರ್ತಿಸಬಹುದು.